


بسم اللهِ الرّحمٰن الرّحيم

# ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ದಾಸ ಹಝ್ರತ್ ಮಸೀಹ್ ಮೌಊದ್(ಅ)ರ ದಾನಶೀಲತೆಯ ಕುರಿತಾದ ವಿಶ್ವಾಸವರ್ಧಕ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–07–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಶೇಖ್ ಯಅ್‌ಖೂಬ್ ಅಲಿ ಸಾಹಿಬ್ ಇರ್ಫಾನಿ(ರ) ಹಝ್ರತ್ ಮಸೀಹ್ ಮೌಊದ್(ಅ)ರ ಜೀವನ ಚರಿತ್ರೆಯನ್ನು ವಿವರಿಸುತ್ತಾ ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರ ಜೀವನದಲ್ಲಿ ದಾನಶೀಲತೆ ಮತ್ತು ಔದಾರ್ಯದ ಮತ್ತೊಂದು ಭವ್ಯತೆಯು ಗೋಚರಿಸುತ್ತದೆ, ಅದು ಶಿಫಾರಸಿನ ರೂಪವನ್ನು ಹೊಂದಿದೆ. ಕೆಲವೊಮ್ಮೆ ಇತರರಿಂದ ಪೂರೈಸಲ್ಪಡಬೇಕಾದ ಬೇಡಿಕೆಗಳಿಗಾಗಿಯೂ ಕೆಲವರು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿಗೆ ಬರುತ್ತಿದ್ದರು. ಅಂತಹ ಸ್ಥಿತಿಯಲ್ಲಿಯೂ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಯಾವುದೇ ವೈಯಕ್ತಿಕ ಅಗತ್ಯಕ್ಕಾಗಿ ಎಂದಿಗೂ ಕೇಳಿರದಿದ್ದವರೊಡನೆಯೂ ಆತನ ಒಳಿತಿಗಾಗಿ ಅವರೊಡನೆ ಶಿಫಾರಸು ಮಾಡುತ್ತಿದ್ದರು. ಉದಾಹರಣೆಗೆ, ಮಿರ್ಝಾ ಇಮಾಮುದ್ದೀನ್ ಸಾಹಿಬ್ ಜಮಾಅತಿನ ಕಡು ವಿರೋಧಿಯಾಗಿದ್ದರು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಕುಟುಂಬದೊಂದಿಗೆ ಆತನಿಗೆ ಶತ್ರುತ್ವವಿತ್ತು. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಲೌಕಿಕ ವಿಷಯಗಳಲ್ಲಿ ಆತನ ಶತ್ರುತ್ವವನ್ನು ಎಂದಿಗೂ ಪರಿವೆ ಮಾಡುತ್ತಿರಲಿಲ್ಲ. ಅಂದರೆ, ಅವನೊಂದಿಗಿನ ವರ್ತನೆಯಲ್ಲಿ ಅವರು ಎಂದಿಗೂ ವ್ಯತ್ಯಾಸ ಮಾಡುತ್ತಿರಲಿಲ್ಲ. ಅವನು ಹಲವು ಬಾರಿ ಹಝ್ರತ್ ಮಸೀಹ್ ಮೌಊದ್(ಅ)ರಿಂದ ಆರ್ಥಿಕ ಸಹಾಯವನ್ನು ಪಡೆದುಕೊಳ್ಳುತ್ತಿದ್ದನು ಮತ್ತು ಈ ಉಪಕಾರಗಳ ಹೊರತಾಗಿಯೂ ವಿರೋಧದಲ್ಲಿ ತೊಡಗಿರುತ್ತಿದ್ದನು. ಒಮ್ಮೆ ಅವನು ಒಂದು ಕುದುರೆಯನ್ನು ಮಾರಬೇಕಾಗಿತ್ತು ಮತ್ತು ಅದಕ್ಕಾಗಿ ಆ ಕುದುರೆಯನ್ನು ಜಮ್ಮುವಿಗೆ ತೆಗೆದುಕೊಂಡು ಹೋಗಿ, ಹಝ್ರತ್ ಮೌಲ್ವಿ ನೂರುದ್ದೀನ್ ಸಾಹಿಬ್ (ಖಲೀಫತುಲ್ ಮಸೀಹ್ ಅವ್ವಲ್‌ರ) ಮೂಲಕ ಪ್ರಸ್ತುತಪಡಿಸಿದರೆ ಅದಕ್ಕೆ ತಕ್ಕ ಬೆಲೆ ಸಿಗಬಹುದು ಎಂದು ಭಾವಿಸಿದನು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಅವನು ಸ್ವತಃ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ, ಹಝ್ರತ್ ಮೌಲ್ವಿ ನೂರುದ್ದೀನ್ ಸಾಹಿಬ್(ರ)ರ ಹೆಸರಲ್ಲಿ ಒಂದು ಶಿಫಾರಸು ಪತ್ರವನ್ನು ಬರೆದುಕೊಡಲು ವಿನಂತಿಸಿದನು. ಹಝ್ರತ್ ಮಸೀಹ್ ಮೌಊದ್(ಅ) ಅವನ ವಿನಂತಿಯನ್ನು ನಿರಾಕರಿಸಲಿಲ್ಲ ಮತ್ತು ಯಾವುದೇ ಹಿಂಜರಿಕೆಯಿಲ್ಲದೆ ಹಝ್ರತ್ ಮೌಲ್ವಿ ಸಾಹಿಬ್(ರ)ರಿಗೆ ಒಂದು ಶಿಫಾರಸು ಪತ್ರವನ್ನು ನೀಡಿದರು.

ಮಿರ್ಝಾ ಮುಹಮ್ಮದ್ ಬೇಗ್ ಹೋಶಿಯಾರ್‌ಪುರಿಯವರ ತಂದೆ ಮಿರ್ಝಾ ಅಹ್ಮದ್ ಬೇಗ್‌ರ ಕುಟುಂಬವು ಕಡು ಧರ್ಮವಿರೋಧಿ ಮತ್ತು ಜಮಾಅತಿನ ಶತ್ರುವಾಗಿದ್ದ ಕಾರಣ, ಆ ಕುಟುಂಬದೊಂದಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ಸಂಬಂಧವು ಉತ್ತಮವಾಗಿರಲಿಲ್ಲ. ಮಿರ್ಝಾ ಮುಹಮ್ಮದ್ ಬೇಗ್ ಜಮ್ಮುವಿನಲ್ಲಿ ಉದ್ಯೋಗವನ್ನು ಬಯಸಿದ್ದರು ಮತ್ತು ಹಝ್ರತ್ ನೂರುದ್ದೀನ್ ಸಾಹಿಬ್(ರ)ರಿಂದ ಸಹಾಯ ಪಡೆಯಲು ಅವರ ಹೆಸರಲ್ಲಿ ಶಿಫಾರಸು ಪತ್ರವನ್ನು ನೀಡುವಂತೆ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ವಿನಂತಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ಯಾವುದೇ ಹಿಂಜರಿಕೆಯಿಲ್ಲದೆ ಹೀಗೆ ಪತ್ರ ಬರೆದರು: 'ಇವರ ತಂದೆ ನನ್ನೊಂದಿಗೆ ಶತ್ರುತ್ವ ಹೊಂದಿದ್ದರೂ, 'ಇದ್‌ಫಅ್ ಬಿಲ್ಲತೀ ಹಿಯ ಅಹ್ಸನ್' (ನೀವು ಕೆಡುಕನ್ನು ಅತ್ಯುತ್ತಮವಾದುದರಿಂದ ದೂರಮಾಡಿರಿ) ಎಂಬ ಪುಣ್ಯವನ್ನು ಗಳಿಸಲಿಕ್ಕಾಗಿ ಅವರ ಕಾಠಿಣ್ಯಕ್ಕೆ ಪ್ರತಿಯಾಗಿ ಸೌಮ್ಯವಾಗಿ ವರ್ತಿಸುವುದರಲ್ಲಿ ಯಾವುದೇ ಅಭ್ಯಂತರವಿಲ್ಲ. ಆದ್ದರಿಂದ ಇವರಿಗೆ ಸಹಾಯ ಮಾಡಿ ಪೊಲೀಸ್ ಇಲಾಖೆಯಲ್ಲಿ ಕೆಲಸ ಕೊಡಿಸಿರಿ.'

ಹಝ್ರತ್ ಶೇಖ್ ಯಅ್‌ಖೂಬ್ ಅಲಿ ಸಾಹಿಬ್ ಇರ್ಫಾನಿ(ರ) ಬರೆಯುತ್ತಾರೆ: ಖಾದಿಯಾನಿನಲ್ಲಿ ನಿಹಾಲ್ ಚಂದ್ ಎಂಬೊಬ್ಬ ಬ್ರಾಹ್ಮಣನಿದ್ದನು. ಆತ ತನ್ನ ಯೌವನದ ದಿನಗಳಲ್ಲಿ ಪ್ರಸಿದ್ಧ ಮೊಕದ್ದಮೆಗಾರನಾಗಿದ್ದ ಮತ್ತು ಹಝ್ರತ್

ಮಸೀಹ್ ಮೌಊದ್(ಅ)ರ ಕುಟುಂಬದೊಂದಿಗೆ ವಿರೋಧ ಹೊಂದಿದ್ದನು ಮತ್ತು ಉಪದ್ರವ ಮಾಡುತ್ತಿದ್ದನು. ಕೊನೆಯ ದಿನಗಳಲ್ಲಿ ಅವನ ಆರ್ಥಿಕ ಸ್ಥಿತಿ ಅತ್ಯಂತ ಹದಗೆಟ್ಟಿತು. ಎಷ್ಟರಮಟ್ಟಿಗೆ ಎಂದರೆ ಕೆಲವೊಮ್ಮೆ ಅವನಿಗೆ ತನ್ನ ದೈನಂದಿನ ಅಗತ್ಯಗಳಿಗೂ ಕಷ್ಟವಾಗುತ್ತಿತ್ತು. ಒಮ್ಮೆ ಅವನು ಹಝ್ರತ್ ಮಸೀಹ್ ಮೌಊದ್(ಅ)ರ ಬಾಗಿಲಿಗೆ ಬಂದು ಭೇಟಿಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದನು ಮತ್ತು ತನ್ನ ಕಥೆಯನ್ನು ಹೇಳಿದನು. ಹಝ್ರತ್ ಮಸೀಹ್ ಮೌಊದ್(ಅ) ಅವನಿಗೆ ಸಾಂತ್ವನ ಹೇಳಿದರು ಮತ್ತು 25 ರೂಪಾಯಿ ನೀಡಿದರು, ಜೊತೆಗೆ 'ಅಗತ್ಯವಿದ್ದಾಗ ನನಗೆ ತಿಳಿಸು' ಎಂದು ಹೇಳಿದರು. ಅನಂತರ ಅದು ಅವನ ವಾಡಿಕೆಯಾಯಿತು. ಅವನು ತಿಂಗಳು-ಎರಡು ತಿಂಗಳಿಗೊಮ್ಮೆ ಬರುತ್ತಿದ್ದನು ಮತ್ತು ತಕ್ಕಮಟ್ಟಿಗಿನ ಹಣವನ್ನು ಪಡೆದುಕೊಳ್ಳುತ್ತಿದ್ದನು. ಒಮ್ಮೆ ಅವನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರಿಂದಲೂ ಸಾಲ ಪಡೆದಿದ್ದನು. ಅವರು ಸಾಲದ ಮರುಪಾವತಿ ಮಾಡಲು ಹೇಳಿದಾಗ ಅವನು ಹೀಗೆ ಹೇಳಿದನು: 'ಮಿರ್ಝಾಜೀ ನನಗೆ ಯಾವಾಗಲೂ ಹಣ ನೀಡುತ್ತಾರೆ ಮತ್ತು ಅದರಿಂದ ನನ್ನ ಜೀವನ ಸಾಗುತ್ತಿದೆ. ಅವರು ಎಂದಿಗೂ ಹಣವನ್ನು ಮರಳಿ ಕೇಳಿಲ್ಲ' ಎಂದು ಹೇಳಿದನು. ಹೀಗೆ ಅವರು ಕೂಡ ಅವನನ್ನು ಸುಮ್ಮನೆ ಬಿಟ್ಟರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ವೈ.ಎಂ.ಸಿ.ಎ. ಕಾರ್ಯದರ್ಶಿಯಾಗಿದ್ದ ಪಾದ್ರಿ ವಾಲ್ಟರ್ ಸಾಹಿಬ್ ಎಂ.ಎ. ತಮ್ಮ ಪುಸ್ತಕದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಕುರಿತು ಹೀಗೆ ಅಭಿಪ್ರಾಯವನ್ನು ಬರೆದಿದ್ದಾರೆ: ಮಿರ್ಝಾ ಸಾಹಿಬ್ ತಮ್ಮ ಅಭ್ಯಾಸಗಳಲ್ಲಿ ಸರಳ ಮತ್ತು ಉದಾರ ಭಾವನೆಗಳನ್ನು ಹೊಂದಿರುವವರಾಗಿದ್ದರು. ತಮ್ಮ ವಿರೋಧಿಗಳ ಕಡೆಯಿಂದ ಉಂಟಾದ ತೀವ್ರ ವಿರೋಧ ಮತ್ತು ಕಿರುಕುಳದ ಮುಂದೆ ಅವರು ತೋರಿದ ಧೈರ್ಯವು ಖಂಡಿತವಾಗಿಯೂ ಶ್ಲಾಘನೀಯವಾಗಿದೆ. ಕಾಂತದಂತಹ ಆಕರ್ಷಣೆ ಮತ್ತು ಅತ್ಯಂತ ಹಿತಕರವಾದ ನೈತಿಕತೆಯನ್ನು ಹೊಂದಿರುವ ವ್ಯಕ್ತಿ ಮಾತ್ರ ಈರೀತಿ ಜನರ ಸ್ನೇಹ ಮತ್ತು ನಿಷ್ಠೆಯನ್ನು ಗಳಿಸಲು ಸಾಧ್ಯ. ಅವರಲ್ಲಿ ಕನಿಷ್ಠ ಇಬ್ಬರು ಅಫ್ಘಾನಿಸ್ತಾನದಲ್ಲಿ ತಮ್ಮ ವಿಶ್ವಾಸಗಳಿಗಾಗಿ ಜೀವಾರ್ಪಣೆ ಮಾಡಿದರು, ಆದರೆ ಅವರು ಮಿರ್ಝಾ ಸಾಹಿಬ್‌ರ ಕೈ ಬಿಡಲಿಲ್ಲ. ನಾನು ಕೆಲವು ಹಳೆಯ ಅಹ್ಮದಿಯರಿಂದ ಅವರು ಅಹ್ಮದಿಯಾಗಲು ಕಾರಣವೇನೆಂದು ಕೇಳಿದಾಗ, ಹೆಚ್ಚಿನವರು ಮಿರ್ಝಾ ಸಾಹಿಬ್(ಅ)ರ ವೈಯಕ್ತಿಕ ಪ್ರಭಾವ ಮತ್ತು ಅವರ ಆಕರ್ಷಕ ವ್ಯಕ್ತಿತ್ವವನ್ನೇ ಅತಿದೊಡ್ಡ ಕಾರಣವಾಗಿ ಮುಂದಿಟ್ಟರು.

ಹಝ್ರತ್ ಮಸೀಹ್ ಮೌಊದ್(ಅ) ಯಾರಿಗಾದರೂ ಏನನ್ನಾದರೂ ನೀಡಿದರೆ ಅದು ಯಾವುದೇ ಪ್ರದರ್ಶನಕ್ಕಾಗಿ ಆಗಿರುತ್ತಿರಲಿಲ್ಲ, ಬದಲಾಗಿ ಅಲ್ಲಾಹನ ಸಂಪ್ರೀತಿಗಾಗಿ ಮತ್ತು ಅಲ್ಲಾಹನ ಸೃಷ್ಟಿಗಳ ಮೇಲಿನ ವಾತ್ಸಲ್ಯದ ಭಾವನೆಯಿಂದ ನೀಡುತ್ತಿದ್ದರು. ಆದ್ದರಿಂದ ಅವರು ಸಾಮಾನ್ಯವಾಗಿ ಅತ್ಯಂತ ರಹಸ್ಯವಾಗಿ ನೀಡುತ್ತಿದ್ದರು ಮತ್ತು ಕೆಲವೊಮ್ಮೆ ಇತರರಿಗೆ ಪ್ರಾಯೋಗಿಕ ಪಾಠವನ್ನು ಕಲಿಸಲು ಬಹಿರಂಗವಾಗಿಯೂ ನೀಡುತ್ತಿದ್ದರು. ಬೇಡುವವರ ಮಾತನ್ನು ನಿರಾಕರಿಸದಿರುವುದು ಅವರ ಅಭ್ಯಾಸವಾಗಿತ್ತು ಮತ್ತು ಕೆಲವು ಜನರ ಅಗತ್ಯಗಳನ್ನು ಅರಿತು ಅವರು ಕೇಳುವ ಮೊದಲೇ ಅವರಿಗೆ ಸಹಾಯ ಮಾಡುವುದು ಕೂಡ ವಾಡಿಕೆಯಾಗಿತ್ತು. 1904ರಲ್ಲಿ ಒಮ್ಮೆ ಒಬ್ಬ ನಿಷ್ಠಾವಂತ ವಲಸಿಗನಿಗೆ, 'ಚಳಿಗಾಲ ಆಗಿರುವುದರಿಂದ ನಿಮಗೆ ಬಟ್ಟೆಗಳ ಅಗತ್ಯವಿರಬಹುದು' ಎಂದು ಹೇಳಿ ಕೆಲವು ರೂಪಾಯಿಗಳನ್ನು ನೀಡಿದರು. ಆದರೆ ಆತನ ಕಡೆಯಿಂದ ಯಾವುದೇ ಬೇಡಿಕೆಯಿರಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಜನರಿಗೆ ಅತ್ಯಂತ ರಹಸ್ಯವಾಗಿ ನೀಡುತ್ತಿದ್ದರು ಮತ್ತು ಅದರಲ್ಲಿ ಮಿತ್ರ-ಶತ್ರು ಎಂಬ ಭೇದಭಾವವಿರಲಿಲ್ಲ. ಶೇಖ್ ಫತಹ್ ಮುಹಮ್ಮದ್ ಸಾಹಿಬ್ ಹೇಳುತ್ತಾರೆ: ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಸನ್ನಿಧಿಯಲ್ಲಿ ಹಾಜರಾಗುವಾಗ ಅವರು ಯಾವಾಗಲೂ ನನ್ನ ಪ್ರಯಾಣದ ವೆಚ್ಚವನ್ನು ಪಾವತಿಸಲು ಸಿದ್ಧರಿರುತ್ತಿದ್ದರು. ನನಗೆ ಅದರ ಅಗತ್ಯವಿಲ್ಲದಿದ್ದರೂ, ಹಝ್ರತ್ ಮಸೀಹ್ ಮೌಊದ್(ಅ)ರ ದಾನಶೀಲತೆಯ ಗುಣವು ಎಷ್ಟೊಂದು ಭವ್ಯವಾಗಿತ್ತೆಂದರೆ, ಅವರು ಕೇಳದೆಯೇ ಯಾವಾಗಲೂ ನೀಡುತ್ತಿದ್ದರು. ಇದು ನನ್ನೊಡನೆ ಮಾತ್ರ ಆಗಿರಲಿಲ್ಲ, ಹೆಚ್ಚಿನವರಿಗೂ ನೀಡುತ್ತಲೇ ಇರುತ್ತಿದ್ದರು. ಸಿರಿಯಾ ಮತ್ತು ಅರೇಬಿಯಾದಿಂದ ಕೆಲವು ಜನರು ಬರುತ್ತಿದ್ದರು. ಅವರು ಬಹಳ ದೂರದಿಂದ ಬಂದಿರುತ್ತಿದ್ದ ಕಾರಣದಿಂದ ಕೆಲವೊಮ್ಮೆ ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ದೊಡ್ಡ ಮೊತ್ತವನ್ನು ಪ್ರಯಾಣದ ಖರ್ಚಿಗಾಗಿ ನೀಡುತ್ತಿದ್ದರು. ಕೆಲವೊಮ್ಮೆ ಜನರು ನೇರವಾಗಿ ಕೇಳದೆ ಚೀಟಿಯನ್ನು ಬರೆದು ಕೊಡುತ್ತಿದ್ದರು. ಆತ ಕೇಳಿದ್ದಾನೆಂದು ಯಾರಿಗೂ ತಿಳಿದಿರುತ್ತಿರಲಿಲ್ಲ, ಆದರೆ ಹಝ್ರತ್ ಮಸೀಹ್ ಮೌಊದ್(ಅ) ಒಳಗಿನಿಂದ ಕೇಳುವವನಿಗಾಗಿ ಏನಾದರೂ ಕಳುಹಿಸುವಾಗ ತಿಳಿದು ಬರುತ್ತಿತ್ತು ಅಥವಾ ಕೆಲವೊಮ್ಮೆ ಒಳಗೆ ಹೋಗುವಾಗ 'ನೀವು ಕುಳಿತುಕೊಳ್ಳಿ, ನಾನು ಬರುತ್ತೇನೆ' ಎಂದು ಹೇಳಿ ಹೋಗುತ್ತಿದ್ದರು. ಅವನಿಗೆ ಬೇಕಾದ ವಸ್ತು, ನಗದು ಅಥವಾ ಬಟ್ಟೆಯನ್ನು ಹಝ್ರತ್ ಮಸೀಹ್ ಮೌಊದ್(ಅ) ತೆಗೆದುಕೊಂಡು ಬರುವಾಗ ಗೊತ್ತಾಗುತ್ತಿತ್ತು.

ಪ್ರವಾದಿತ್ವದ ವಾದಕ್ಕೂ ಮುನ್ನ ಹಝ್ರತ್ ಮಸೀಹ್ ಮೌಊದ್(ಅ)ರ ಸಹೋದರನ ಮದುವೆಯ ಸಮಯದಲ್ಲಿ ಅವರು ಕೆಲವು ಮೇಕೆಗಳನ್ನು ಖರೀದಿಸಿದ್ದರು. ಅವುಗಳನ್ನು ನಂಗಲ್ ಬಾಗ್ಬಾನಾದ ಒಬ್ಬ ವ್ಯಕ್ತಿ ಮೇಯಿಸುತ್ತಿದ್ದನು. ಒಂದು ದಿನ ಹಝ್ರತ್ ಮಸೀಹ್ ಮೌಊದ್(ಅ) ವಾಯುವಿಹಾರಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿ ಆ ವ್ಯಕ್ತಿಯನ್ನು ನೋಡಿದರು. ಅವನೊಂದಿಗೆ ಅವನ ಮಗನೂ ಇದ್ದನು, ಆದರೆ ಅವನು ಬರಿಗಾಲಿನಲ್ಲಿದ್ದನು. ಹಝ್ರತ್ ಮಸೀಹ್ ಮೌಊದ್(ಅ)

ಅವನತ್ತ ನೋಡಿ ಹೀಗೆ ಕೇಳಿದರು: 'ಸೋದರ, ನೀನು ಬರಿಗಾಲಿನಲ್ಲಿ ತಿರುಗುತ್ತಿದ್ದೀಯಾ, ನಿನಗೆ ಮುಳ್ಳು ಚುಚ್ಚುವುದಿಲ್ಲವೇ?' ಅವನು ಹೇಳಿದನು: 'ಹುಝೂರ್, ನನ್ನ ಬಳಿ ಚಪ್ಪಲಿಯಿಲ್ಲ.' ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಚಪ್ಪಲಿಯನ್ನು ತೆಗೆದು ಅವನಿಗೆ ತೊಡಿಸಿದರು. ಅವನು ನಿರಾಕರಿಸಿದಾಗ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಪರವಾಗಿಲ್ಲ, ಇದನ್ನು ಧರಿಸು ಮತ್ತು ಉಪಯೋಗಿಸು.' ಅನಂತರ ಹಝ್ರತ್ ಮಸೀಹ್ ಮೌಊದ್(ಅ) ಬರಿಗಾಲಿನಲ್ಲಿಯೇ ಮನೆಗೆ ಹಿಂತಿರುಗಿದರು. ಆ ಸಮಯ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಇಪ್ಪತ್ತು ಅಥವಾ ಮೂವತ್ತು ವರ್ಷ ಪ್ರಾಯವಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಔದಾರ್ಯವಂತ ನೇತಾರರಾದ ಹಝ್ರತ್ ಪೈಗಂಬರ್(ಸ)ರ ಅನುಸರಣೆಯಲ್ಲಿ ಔದಾರ್ಯ ಮತ್ತು ದಾನಶೀಲತೆಯ ಸಾಕಾರ ರೂಪಿಯಾಗಿದ್ದರು. ಆದರೂ ಕೆಲವೊಮ್ಮೆ ಯಾವುದಾದರೂ ಯುಕ್ತಿ ಮತ್ತು ಒಳಿತಿನ ದೃಷ್ಟಿಯಿಂದ ಹಝ್ರತ್ ಮಸೀಹ್ ಮೌಊದ್(ಅ) ಬೇಡುವವನಿಗೆ ನೀಡುವುದರಿಂದ ಹಿಂದೆ ಸರಿಯುತ್ತಿದ್ದರು ಎಂಬುದು ಕೂಡ ನಮಗೆ ಕಂಡುಬರುತ್ತದೆ. ಶೇಖ್ ಯಅ್‌ಖೂಬ್ ಅಲಿ ಸಾಹಿಬ್(ರ) ಬರೆಯುತ್ತಾರೆ: 1889ರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಲುಧಿಯಾನಾದಲ್ಲಿ ಇದ್ದರು. ಅವರ ಬಳಿ ಒಬ್ಬ ವ್ಯಕ್ತಿ ಬಂದು ಹೀಗೆ ಹೇಳಿದನು: 'ನನ್ನ ಸಂಬಂಧಿಕನೊಬ್ಬ ಮರಣಹೊಂದಿದ್ದಾನೆ. ಕಫನ್ ಮತ್ತು ಶವಸಂಸ್ಕಾರಕ್ಕಾಗಿ ನನ್ನ ಬಳಿ ಏನೂ ಇಲ್ಲ.' ಹಝ್ರತ್ ಮಸೀಹ್ ಮೌಊದ್(ಅ) ಖಾಝಿ ಖಾಜಾ ಅಲಿ ಸಾಹಿಬ್(ರ)ರೊಡನೆ ಹೀಗೆ ಹೇಳಿದರು: 'ಇವನ ಜೊತೆ ಹೋಗಿ ಕಫನಿನ ವ್ಯವಸ್ಥೆ ಮಾಡಿಕೊಡಿ.' ಸಾಮಾನ್ಯವಾಗಿ ಇದು ಅವರ ಅಭ್ಯಾಸವಾಗಿರಲಿಲ್ಲ, ಬದಲಾಗಿ ಯಾಚಕನಿಗೆ ಕೊಟ್ಟುಬಿಡುತ್ತಿದ್ದರು. ಖಾಝಿ ಸಾಹಿಬ್ ಯಾಚಕನೊಂದಿಗೆ ಹೊರಟರು ಮತ್ತು ಸ್ವಲ್ಪ ಸಮಯದ ನಂತರ ನಗುತ್ತಾ ಮರಳಿ ಬಂದು ಹೇಳಿದರು: 'ನೀವು ಬರಬೇಡಿ, ಏನು ಕೊಡಬೇಕೋ ಅದನ್ನು ಕೊಟ್ಟುಬಿಡಿ ಎಂದು ಯಾಚಕನು ವಿನಂತಿ ಮಾಡಲು ಮತ್ತು ಹೊಗಳಲು ಪ್ರಾರಂಭಿಸಿದ್ದನು. ಹಾಗಲ್ಲ, ನನಗೆ ಆದೇಶಿಸಲಾಗಿರುವುದನ್ನೇ ನಾನು ಮಾಡುವೆನು ಎಂದು ನಾನು ಹೇಳಿದಾಗ, ಅವನು ಹೇಳಿದನು: 'ಯಾರೂ ಮೃತಪಟ್ಟಿಲ್ಲ, ಶವಸಂಸ್ಕಾರ ಇತ್ಯಾದಿಗಳ ಅಗತ್ಯವೂ ಇಲ್ಲ. ಇದು ನನ್ನ ವೃತ್ತಿಯಾಗಿದೆ. ಈಗ ನನ್ನ ರಹಸ್ಯವನ್ನು ಬಯಲು ಮಾಡಬೇಡಿ' ಹೀಗೆ ಹೇಳಿ ಅವನು ಹೊರಟುಹೋದನು.'

ಹಝ್ರತ್ ಮಸೀಹ್ ಮೌಊದ್(ಅ) ಮಕ್ಕಳಿಗೂ ಅವರ ಆಸೆ ಪ್ರಕಾರವೂ ನೀಡುತ್ತಿದ್ದರು. ಖಾದಿಯಾನಿನ ಹಕೀಮ್ ಮುಹಮ್ಮದ್ ಉಮರ್ ಸಾಹಿಬ್‌ರ ಪತ್ನಿಯಾದ ಅಝೀಝು ಬೇಗಮ್‌ರ ತಾಯಿ ಬೀಬಿ ರಾಣಿ ಹೇಳುತ್ತಾರೆ: ನಾನು 1901ರಲ್ಲಿ ಪತ್ರದ ಮೂಲಕ ಬೈಅತ್ ಮಾಡಿದೆ. 1902ರಲ್ಲಿ ಖಾದಿಯಾನಿಗೆ ಬಂದಾಗ ನನ್ನ ಚಿಕ್ಕ ಮಗಳು ಜೊತೆಗಿದ್ದಳು. ಹಝ್ರತ್ ಮಸೀಹ್ ಮೌಊದ್(ಅ) ಬೆಳಿಗ್ಗೆ ವಾಯುವಿಹಾರಕ್ಕಾಗಿ ತೋಟದ ಕಡೆಗೆ ಹೋಗುತ್ತಿದ್ದರು. ನಾನು ಕೂಡ ಹೆಚ್ಚಿನ ಸಮಯ ಜೊತೆಗೆ ಹೋಗುತ್ತಿದ್ದೆ. ಒಮ್ಮೆ ಮುಂಜಾನೆ ಹಝ್ರತ್ ಮಸೀಹ್ ಮೌಊದ್(ಅ) ಊಟ ಮಾಡುತ್ತಿದ್ದಾಗ ನಾನು ಕೂಡ ಅಲ್ಲಿಗೆ ಹೋದೆ. ನನ್ನ ಚಿಕ್ಕ ಮಗಳು ಅಳಲು ಪ್ರಾರಂಭಿಸಿದಳು. 'ಏನು ಹೇಳುತ್ತಿದ್ದಾಳೆ?' ಎಂದು ಹಝ್ರತ್ ಮಸೀಹ್ ಮೌಊದ್(ಅ) ಕೇಳಿದರು. 'ರೊಟ್ಟಿ ಕೇಳುತ್ತಿದ್ದಾಳೆ' ಎಂದು ನಾನು ಹೇಳಿದೆ. ಹಝ್ರತ್ ಮಸೀಹ್ ಮೌಊದ್(ಅ) ರೊಟ್ಟಿ ನೀಡಿದರು. ಆದರೆ ಅವಳು ಸುಮ್ಮನಾಗಲಿಲ್ಲ. ಮತ್ತೆ, 'ಈಗ ಏನು ಹೇಳುತ್ತಿದ್ದಾಳೆ?' ಎಂದು ಕೇಳಿದರು. ನಾನು ಹೇಳಿದೆ: 'ನೀವು ತಿನ್ನುತ್ತಿರುವ ರೊಟ್ಟಿಯನ್ನು ಅವಳು ಕೇಳುತ್ತಿದ್ದಾಳೆ.' ಹಝ್ರತ್ ಮಸೀಹ್ ಮೌಊದ್(ಅ) ತಾವು ತಿನ್ನುತ್ತಿದ್ದ ರೊಟ್ಟಿಯನ್ನು ಅವಳಿಗೆ ನೀಡಿದರು, ತದನಂತರ ಅವಳು ಸುಮ್ಮನಾಗಿ ತಿನ್ನಲಾರಂಭಿಸಿದಳು.

(ಹುಝೂರ್ ಹೇಳಿದರು:) ಲಂಗರ್‌ನ ಖರ್ಚು ಹೆಚ್ಚಾದಾಗ ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಅಮ್ಮಾ ಜಾನ್(ರ)ರ ಆಭರಣವನ್ನು ಮಾರಿ ಖರ್ಚನ್ನು ಸರಿದೂಗಿಸಿದ ಘಟನೆಯನ್ನು ನಾನು ಕಳೆದ ಖುತ್ಬದಲ್ಲಿ ವಿವರಿಸಿದ್ದೆ. 'ಅಗತ್ಯ ಬರುವಾಗ ಪತ್ನಿಯ ಆಭರಣವನ್ನು ಪತಿ ಬಳಸಬಹುದೇ ಮತ್ತು ಖರ್ಚು ಮಾಡಬಹುದೇ?' ಎಂದು ಕಳೆದ ವಾರ ಒಬ್ಬರು ನನ್ನನ್ನು ಕೇಳಿದ್ದರು. ವಾಸ್ತವದಲ್ಲಿ, ಹಝ್ರತ್ ಮಸೀಹ್ ಮೌಊದ್(ಅ) ಅವುಗಳನ್ನು ಸಾಲವಾಗಿ ಪಡೆಯುತ್ತಿದ್ದರು ಮತ್ತು ಅದನ್ನು ಮರುಪಾವತಿಸುತ್ತಿದ್ದರು. ಈ ಬಗ್ಗೆ ಒಂದು ವರದಿಯಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಅಮ್ಮಾಜಾನ್(ರ)ರಿಂದ ಹಣವನ್ನು ಸಾಲವಾಗಿ ಪಡೆದರು. ಗೋಧಿ ಖರೀದಿಸಿ ಲಂಗರ್‌ನ ಖರ್ಚು ಮತ್ತು ಮನೆಯ ಖರ್ಚನ್ನು ಪೂರೈಸಿದರು, ಏಕೆಂದರೆ ಬಹಳಷ್ಟು ಊಟ ಹಝ್ರತ್ ಮಸೀಹ್ ಮೌಊದ್(ಅ)ರ ಮನೆಯಿಂದಲೇ ತಯಾರಾಗುತ್ತಿತ್ತು. ಅನಂತರ ಹಝ್ರತ್ ಮಸೀಹ್ ಮೌಊದ್(ಅ) ಚೌಧರಿ ರುಸ್ತುಮ್ ಅಲಿ ಸಾಹಿಬ್‌ರಿಂದ 500 ರೂಪಾಯಿಗಳನ್ನು ಪಡೆದು ಸ್ವಲ್ಪ ತುಪ್ಪದ ಜಾಡಿಗಳನ್ನು ಖರೀದಿಸಿದರು ಮತ್ತು ಹಝ್ರತ್ ಅಮ್ಮಾ ಜಾನ್(ರ)ರ ಸಾಲವನ್ನು ತೀರಿಸಿದರು.

ಊಟದಲ್ಲಿ ಸಮೃದ್ಧಿ ಉಂಟಾದ ಒಂದು ಘಟನೆಯಿದೆ. ಹಝ್ರತ್ ಮಿಯಾನ್ ಅಬ್ದುಲ್ಲಾಹ್ ಸಾಹಿಬ್ ಸನೌರಿ(ರ) ಹೇಳುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಕೆಲವು ಅತಿಥಿಗಳಿಗೆ ಆಮಂತ್ರಣ ನೀಡಿದರು. ಊಟದ

ಸಮಯದಲ್ಲಿ ಅಷ್ಟೇ ಸಂಖ್ಯೆಯ ಬೇರೆ ಅತಿಥಿಗಳು ಸಹ ಬಂದರು. ಹಝ್ರತ್ ಅಮ್ಮಾ ಜಾನ್(ರ) ಹೇಳಿದರು: 'ಹೇಗಾದರೂ ಮಾಡಿ ಊಟದ ವ್ಯವಸ್ಥೆಯಾಗಬಹುದು, ಆದರೆ ಝುರ್ದಾ ಬಹಳ ಕಡಿಮೆಯಿದೆ, ಆದ್ದರಿಂದ ಅದನ್ನು ಇಡುವುದು ಬೇಡ.' ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಅದು ಸರಿಯಲ್ಲ. ನೀನು ಝುರ್ದಾದ ಪಾತ್ರೆಯನ್ನು ನನ್ನ ಬಳಿ ತಾ.' ಹಝ್ರತ್ ಮಸೀಹ್ ಮೌಊದ್(ಅ) ಆ ಪಾತ್ರೆಯ ಮೇಲೆ ರುಮಾಲನ್ನು ಹಾಕಿದರು ಮತ್ತು ರುಮಾಲಿನ ಕೆಳಗಿಂದ ತಮ್ಮ ಕೈಯನ್ನು ತೂರಿಸಿ, ತಮ್ಮ ಬೆರಳುಗಳನ್ನು ಝುರ್ದಾದೊಳಗೆ ಇಟ್ಟರು. ಅನಂತರ, 'ಎಲ್ಲರಿಗೂ ಊಟ ಬಡಿಸಿ' ಎಂದು ಹೇಳಿದರು. ಈ ಊಟವನ್ನು ಬಡಿಸಿದಾಗ ಎಲ್ಲರೂ ತಿಂದರು ಮತ್ತು ಸ್ವಲ್ಪ ಝುರ್ದಾ ಉಳಿಯಿತು.

ಇವು ಹಝ್ರತ್ ಮಸೀಹ್ ಮೌಊದ್(ಅ)ರ ಔದಾರ್ಯ ಮತ್ತು ದಾನಶೀಲತೆಯ ಕೆಲವು ಘಟನೆಗಳಾಗಿವೆ, ಇದರಲ್ಲಿ ತಮ್ಮ ಯಜಮಾನರಾದ ಹಝ್ರತ್ ಪೈಗಂಬರ್(ಸ)ರನ್ನು ಅನುಸರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಎಂತಹ ಮಾದರಿಯನ್ನು ತೋರಿಸಿದರೆಂದರೆ, ತಮ್ಮವರು ಮತ್ತು ಪರರು ಮಾತ್ರವಲ್ಲ, ಶತ್ರುಗಳು ಕೂಡ ಪ್ರಯೋಜನ ಪಡೆಯುತ್ತಿದ್ದರು.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 10-07-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon